# ಮಕ್ಕಳ ಅಗತ್ಯ ಮುಖ್ಯ, ಕಪ್ಪು-ಬಿಳುಪು ಚಿಂತನೆಯಲ್ಲ

'ಪ್ರಸ್ತುತ ನಾವು ಕನ್ನಡ ಮಾಧ್ಯಮವೋ ಇಂಗ್ಲಿಷ್ ಮಾಧ್ಯಮವೋ ಎಂಬ ಎರಡು ಧ್ರುವಗಳ ನಡುವೆ ಚರ್ಚೆ ಮಾಡುತ್ತಿದ್ದೇವೆ. ಆದರೆ ಇವೆರಡೂ ವಿಚಾರಗಳನ್ನು ತೀರಾ ಕಪ್ಪು–ಬಿಳುಪು ಮಾದರಿಯಲ್ಲಿ ಪರಿಗಣಿಸದೇ ಇಂದಿನ ತಲೆಮಾರಿನ ಮಕ್ಕಳಿಗೆ ಏನು ಅಗತ್ಯ ಎಂಬ ದೃಷ್ಟಿಯನ್ನಿಟ್ಟುಕೊಂಡು ಸರ್ಕಾರವು ಶಿಕ್ಷಣ ವ್ಯವಸ್ಥೆಯನ್ನು ರೂಪಿಸಬೇಕು' ಎನ್ನುವುದು ತತ್ವಶಾಸ್ತ್ರಜ್ಞ, ಲೇಖಕ ಪ್ರೊ. ಸುಂದರ ಸಾರುಕ್ಕೈ ಪ್ರತಿಪಾದನೆ.

'ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆಯ ಅರಿವು ತುಂಬಾ ಅಗತ್ಯ. ಹಾಗೆಂದು ಕೇವಲ ಮಾತೃಭಾಷೆಯನ್ನು ಮಾತ್ರ ನೆಚ್ಚಿಕೊಂಡರೆ ಜಾಗತಿಕವಾಗಿ ಮುಕ್ತವಾಗಿರುವ ಇಂದಿನ ಸಮಾಜದಲ್ಲಿ ಶಿಕ್ಷಣವನ್ನು ಮುಂದುವರೆಸುವಾಗ ಮಕ್ಕಳಿಗೆ ಕಷ್ಟವಾಗಬಹುದು. ಆದ್ದರಿಂದ ಕನ್ನಡ ಮಾಧ್ಯಮದ ಶಿಕ್ಷಣ ಪಡೆಯುವ ಮಕ್ಕಳು ಇಂಗ್ಲಿಷ್ ಜ್ಞಾನವನ್ನು ಪಡೆಯುವ ವ್ಯವಸ್ಥೆಯನ್ನೂ, ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ಮಕ್ಕಳಿಗೆ ಕನ್ನಡ ಜ್ಞಾನವನ್ನು ಪಡೆಯುವ ವ್ಯವಸ್ಥೆಯನ್ನೂ ಸರ್ಕಾರ ಕಲ್ಪಿಸಬೇಕು' ಎಂದು ಸುಂದರ್ ಹೊಸದಾರಿಯೊಂದನ್ನು ಮುಂದಿಡುತ್ತಾರೆ.



ಪ್ರೊ. ಸುಂದರ ಸಾರುಕ್ಕೈ

ಇಂದು ಹಲವೆಡೆಗಳಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಓದುವ ಮಕ್ಕಳಿಗೆ ಕನ್ನಡವನ್ನು ನೆಪಮಾತ್ರಕ್ಕೆ ಕಲಿಸಲಾಗುತ್ತದೆ. ಅದರಿಂದ ಮಕ್ಕಳಿಗೆ ಯಾವುದೇ ಪ್ರಯೋಜನ ಇಲ್ಲ. ಕನ್ನಡದ ಜ್ಞಾನವೆಂದರೆ ಅವರಿಗೆ ಪತ್ರಿಕೆಗಳನ್ನು ಓದುವ, ಕನ್ನಡ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳುವ, ಗ್ರಾಮೀಣ ಭಾಗದ ಆಚಾರ ವಿಚಾರಗಳನ್ನು ಸಮರ್ಥವಾಗಿ ಗ್ರಹಿಸುವಷ್ಟು ಜ್ಞಾನ ಸಿಗಬೇಕಲ್ಲವೇ. ಆಗ ಅವರು ನಮ್ಮದೇ ನಾಡನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಇಂಗ್ಲಿಷ್ ಜ್ಞಾನವೂ ಹಾಗೆಯೇ ತುಸು ಆಳವಾಗಿ ಇರಬೇಕು. ಒಟ್ಟಿನಲ್ಲಿ ಅವರು ಹತ್ತನೇ ತರಗತಿಯನ್ನು ದಾಟಿ ಮುಂದಿನ ಶಿಕ್ಷಣ ಪಡೆಯುವಷ್ಟರಲ್ಲಿ ಮಾತೃಭಾಷೆ ಮತ್ತು ಇಂಗ್ಲಿಷ್‌ನಲ್ಲಿ ಸಮರ್ಥರಾಗಿರುವುದು ಮುಖ್ಯ ಎಂಬುದು ಅವರ ನಿಲುವು.

ಅಂದರೆ ಉನ್ನತ ಶಿಕ್ಷಣ ಪಡೆಯುವಾಗ ಕನ್ನಡದ ಮಕ್ಕಳಿಗೆ ಮಾಧ್ಯಮ ತೊಡಕಾಗಬಾರದು. ಕನ್ನಡದಲ್ಲಿ ಓದಿದ ಮಕ್ಕಳು ಇಂಗ್ಲಿಷ್‌ನಲ್ಲಿ ಸಮರ್ಥವಾಗಿ ಪೇಪರ್‌ಗಳನ್ನು ಪ್ರಕಟಿಸುವಷ್ಟು ಜ್ಞಾನವಂತರಾದಾಗ ಅವರು ಎಲ್ಲ ಕ್ಷೇತ್ರಗಳಲ್ಲಿಯೂ ಎಗ್ಗಿಲ್ಲದೇ ಮುಂದುವರೆಯುವುದು ಸಾಧ್ಯವಾಗುತ್ತದೆ. ಈಗಂತೂ ಕನ್ನಡ ಮಾಧ್ಯಮದಲ್ಲಿ ಬರೆಯುವ ಮಕ್ಕಳಿಗೆ ಅಂತರರಾಷ್ಟ್ರೀಯ ಗುಣಮಟ್ಟದ ಜರ್ನಲ್‌ಗಳಲ್ಲಿ ಉತ್ತಮ ಬರಹಗಳನ್ನು ಪ್ರಕಟಿಸುವುದು ಸಾಕಷ್ಟು ಕಷ್ಟವಾಗುತ್ತಿದೆ. ಅವರಲ್ಲಿ ಅತ್ಯುತ್ತಮ ಜ್ಞಾನವಿದ್ದರೂ ಅವರು ಎಷ್ಟೋ ಹುದ್ದೆಗಳಿಗೆ ಅರ್ಜಿ ಸಲ್ಲಿಸುವುದು ಸಾಧ್ಯವಾಗುವುದಿಲ್ಲ. ಇದರಿಂದ ಅವರ ಜ್ಞಾನದ ಸದುಪಯೋಗ ಸಮಾಜಕ್ಕೂ ಆಗುವುದಿಲ್ಲ. ವೈಯಕ್ತಿಕವಾಗಿಯೂ ಅವರು ಬೆಳೆಯುವುದು ಸಾಧ್ಯವಾಗುವುದಿಲ್ಲ. ಈ ಸವಾಲನ್ನು ಸರ್ಕಾರವು ಬಿಡಿಸಬೇಕು ಎಂದು ಆಗ್ರಹಿಸುತ್ತಾರೆ ಸಾರುಕ್ಕೈ.

ಈ ಶೈಕ್ಷಣಿಕ ವಿಕಾಸಕ್ಕೆ ಸರ್ಕಾರ ಉತ್ತಮವಾದ ಮೂಲಸೌಕರ್ಯವೊಂದನ್ನು ದೊಡ್ಡ ಮಟ್ಟದಲ್ಲಿ ರೂಪಿಸಬೇಕು. ನಾಗರಿಕರಿಗೆ ಜ್ಞಾನ ಸಂಪನ್ಮೂಲದ ದಾರಿಗಳು ಲಭ್ಯವಾಗುವಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿಯೇ ಆಗಿದೆ ಎಂದು ಹೇಳುತ್ತ ಅವರು, ಶಾಲೆಗಳಲ್ಲಿ ಭಾಷಾ ತರಬೇತಿಯನ್ನು ಕೊಟ್ಟರೂ ಈ ಸವಾಲನ್ನು ತಕ್ಕಮಟ್ಟಿಗೆ ಬಗೆಹರಿಸಬಹುದು ಎನ್ನುತ್ತಾರೆ.

ಮಕ್ಕಳಿಗೆ ಎಲ್ಲ ಪಾಠವನ್ನೂ ಕನ್ನಡ ಮಾಧ್ಯಮದಲ್ಲಿಯೇ ಮಾಡಬೇಕಿಲ್ಲ. ಅಥವಾ ಎಲ್ಲ ಪಾಠಗಳನ್ನೂ ಇಂಗ್ಲಿಷ್‌ನಲ್ಲಿಯೇ ಮಾಡಬೇಕಿಲ್ಲ. ಬದಲಿಗೆ ಭಾಷೆಯ ತರಬೇತಿ ಕೊಟ್ಟರೂ ಸಾಕು. ಅವರು ತಮ್ಮ ಗ್ರಹಿಕೆಯ ಸಾಮರ್ಥ್ಯವನ್ನು ವಿಸ್ತರಿಸುತ್ತಾ ಹೋಗುತ್ತಾರೆ. ತೃತೀಯ ಭಾಷೆಯಾಗಿ ಮಕ್ಕಳು ಏನು ಕಲಿಯುತ್ತಾರೋ ಅದರಿಂದ ಯಾವುದೇ ಪ್ರಯೋಜನವಿಲ್ಲ ಎಂಬುದು ಸಾರುಕ್ಕೈ ಅನಿಸಿಕೆ.




ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ಪಡೆದರೆ ಮಕ್ಕಳು ಅದ್ಭುತವಾದುದನ್ನು ಸಾಧಿಸಬಲ್ಲರು ಎಂಬ ಪರಿಕಲ್ಪನೆ ಇತ್ತೀಚೆಗಿನ ವರ್ಷಗಳಲ್ಲಿ ಕರಗುತ್ತಾ ಬಂದಿದೆ. ಕೇವಲ ಭಾಷಾಮಾಧ್ಯಮವೇ ಜ್ಞಾನವಲ್ಲ. ಆ ಮಾಧ್ಯಮದಲ್ಲಿ ಅವರು ಗ್ರಹಿಸುವ ವಿಚಾರಗಳೇ ಜ್ಞಾನ ಎಂಬ ಅರಿವು ಮೂಡುತ್ತಲೇ ಇಂಗ್ಲಿಷ್ ಭಾಷೆಯ ವ್ಯಾಮೋಹ ಕಡಿಮೆಯಾಗಿದೆ. ಆದರೆ ಈ ಭಾಷೆಯನ್ನು ಕಲಿಯದೇ ಇದ್ದರೆ ಸಾಮಾಜಿಕ ವ್ಯವಹಾರ ಸಾಧ್ಯವಿಲ್ಲ. ಉದ್ಯೋಗ ಅವಕಾಶಗಳಿಗೂ ಇಂಗ್ಲಿಷ್ ತೀರಾ ಅನಿವಾರ್ಯ ಆಗಿಬಿಟ್ಟಿದೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ.

ಕಾಲೇಜಿನಲ್ಲಿ ನಡೆದ ಉದ್ಯೋಗಮೇಳ, ಜಿಲ್ಲಾಡಳಿತದಿಂದ ನಡೆದ ಉದ್ಯೋಗಮೇಳದಲ್ಲಿ ಭಾಗವಹಿಸಿದ ಅಶ್ವಿನಿಗೆ ಅಂಕಗಳು ಚೆನ್ನಾಗಿಯೇ ಇವೆ. ಅವಳು ಬಿ.ಎ. ಪದವಿಯನ್ನು ಕನ್ನಡ ಮಾಧ್ಯಮದಲ್ಲಿ ಮಾಡಿದ್ದಳು. ಐಚ್ಛಿಕ ಕನ್ನಡ ಆಯ್ಕೆ ಮಾಡಿಕೊಂಡಿದ್ದರಿಂದ ಇಂಗ್ಲಿಷ್ ಸುಮಾರಾಗಿತ್ತು. 'ಸಂಸ್ಥೆಯ ಕೆಲಸ ಹಾಗಿರಲಿ. ಮಾಲ್‌ಗಳಲ್ಲಿ ಷೋ ರೂಂಗಳಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲೂ ಇಂಗ್ಲಿಷ್ ಬೇಕು' ಅಂತಾರೆ ಎಂದು ಬೇಸರ ವ್ಯಕ್ತಪಡಿಸುತ್ತಾರೆ. ಇಷ್ಟೊಂದು ಪ್ರಮಾಣದಲ್ಲಿ ಇಂಗ್ಲಿಷ್